
# ಹನಿಗಳು



## 1

ಎಡವಿದ್ದೇನೆ ಎನ್ನುವುದಕ್ಕೆ
ಕಾಲ್ಬೆರಳು ಗಾಯಗೊಂಡಿರುವುದೇ ಸಾಕ್ಷಿ
ಸುಳ್ಳಲ್ಲ
ಆ ಪುಡಿಗಲ್ಲನ್ನೂ ನಾನು
ಗುರುವೆಂದೇ ಸ್ಮರಿಸುವೆ

ಗಾಯಗೊಳಿಸುವ ಶಕ್ತಿ
ಬರಿಯ ಬಾಣ ಚೂರಿಗಳಿಗಲ್ಲ
ಪುಟ್ಟ ಹರಳೂ ಸಾಕು ಎಂಬುದಕ್ಕೆ
ಉಳಿದ ಜೀವಸಾಕ್ಷಿ

## 2

ಜೊತೆಗಾರ
ಕೆಸರಿಗೆ ಕಲ್ಲೆಸೆದ
ಸಿಡಿದ ಹಸಿ
ಅರಿವೆಗೆ ಕಲೆಯಾಯಿತು

ಒರೆಸಿಕೊಂಡು ಮುಖವ
ಕನ್ನಡಿಗೆ ಹಿಡಿದೆ
ಹಣತೆ ಬೆಳಕಿನಲ್ಲಿ
ಅರಿವು ಎದೆಗಿಳಿಯಿತು

## 3

ದಾರಿಹೋಕನೊಬ್ಬ
ಕಲ್ಲು
ಬೀಸಿದ್ದೇನೋ ನಿಜ
ಹಣ್ಣಿನಾಸೆಗೆ ಮರಕ್ಕೆ

ಮರದ ನೆರಳಿನಲಿ
ನಿಂತದ್ದೇ ತಪ್ಪೆಂದಿತು
ಅಕಾಲ
ನೀತಿ ಕುಕ್ಕಿತು ನೆತ್ತಿಗೆ



## 4

ನಿಜ
ತಲೆದಂಡಕ್ಕೆ ಭಾಜನ ನಾನು
ಹೆಬ್ಬೆರಳು ತುಳಿದ
ಆರೋಪ ನನ್ನ ಮೇಲಿದೆ

ನಿರಪರಾಧದ ಸಾಬೀತಿಗೆ
ಸಕಾಲವಲ್ಲ ಇದು
ಪುರಾವೆಗಳ ಹರಾಜಿನಲ್ಲಿ
ವಿಶ್ವಾಸ ಶ್ವಾಸ ಕಳೆದುಕೊಂಡಿದೆ

● ಬಿ. ಪೀರಬಾಷ

ಚಿತ್ರಗಳು: ವಾಗೀಶ ಹೆಗಡೆ